ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	654
ವಿಧಾನ ಪರಿಷತ್ ಸದಸ್ಯರ ಹೆಸರು	:	ಶ್ರೀ ರಘುನಾಥ್ ರಾವ್ ಮಲ್ಕಾಪುರೆ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	24.09.2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು

<table>
<tr><th>ಕ್ರ.
ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಅ</td><td>ಬೀದರ್ ಜಿಲ್ಲೆಯ ಮಾಂಜ್ರಾ ಸರಣಿ ಬ್ಯಾರೇಜ್‌ಗಳಲ್ಲಿ ಗೇಟ್ ಸಮಸ್ಯೆಯಾಗಿ ನೀರು ಇಲ್ಲದಿರುವುದರ ಬಗ್ಗೆ ತನಿಖೆಗೆ ಹೈಕೋರ್ಟ್ ಆದೇಶಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ ವಿವರವಾದ ಮಾಹಿತಿ ನೀಡುವುದು.</td><td>ಗೋದಾವರಿ ಕಣಿವೆಯಲ್ಲಿ ರಾಜ್ಯಕ್ಕೆ ಹಂಚಿಕೆಯಾಗಿರುವ 22.37 ಟಿ.ಎಂ.ಸಿ. ನೀರಿನ ಬಳಕೆಗಾಗಿ ಪರಿಷ್ಕೃತ ಯೋಜನಾವಾರು ನೀರಿನ ಹಂಚಿಕೆಯಡಿ ಮಾಂಜ್ರಾ ನದಿ ಪಾತ್ರದಡಿ 4.80 ಟಿ.ಎಂ.ಸಿ. ನೀರನ್ನು ಬಳಸಿ 12,672 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಕಲ್ಪಿಸಲು ಸರ್ಕಾರದ ಆದೇಶದನ್ವಯ ಈ ಕೆಳಕಂಡಂತೆ ನಾಲ್ಕು ಸರಣಿ ಬ್ಯಾರೇಜುಗಳನ್ನು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಿಂದ ನಿರ್ಮಿಸಲಾಗಿರುತ್ತದೆ.
<table>
<tr><th>ಕ್ರ
ಸಂ</th><th>ಬ್ಯಾರೇಜ್ ಹೆಸರು</th><th>ನೀರಿನ ಬಳಕೆ
(ಟಿ.ಎಂ.ಸಿ)</th><th>ನೀರಾವರಿ ಕ್ಷೇತ್ರ
(ಹೆಕ್ಟೇರ್)</th></tr>
<tr><td>1</td><td>ಜೀರಗಿಹಾಳ್</td><td>0.78</td><td>1,980</td></tr>
<tr><td>2</td><td>ಮಾಣೀಕೇಶ್ವರ</td><td>0.78</td><td>1,980</td></tr>
<tr><td>3</td><td>ಹಾಲಹಳ್ಳಿ</td><td>2.46</td><td>6,732</td></tr>
<tr><td>4</td><td>ಚಂದಾಪುರ</td><td>0.78</td><td>1,980</td></tr>
<tr><td></td><td>ಒಟ್ಟು</td><td>4.80</td><td>12,672</td></tr>
</table>

ಬೀದರ್ ಜಿಲ್ಲೆಯ ಮಾಂಜ್ರಾ ಸರಣಿ ಬ್ಯಾರೇಜ್‌ಗಳಲ್ಲಿ ಗೇಟ್ ಸಮಸ್ಯೆಯಾಗಿ ನೀರು ಇಲ್ಲದಿರುವುದರ ಬಗ್ಗೆ ಸಾಮಾಜಿಕ ಕಾರ್ಯಕರ್ತರಾದ ಶ್ರೀ ಗುರುನಾಥ ವಡ್ಡೆಯವರು ತನಿಖೆ ನಡೆಸಲು ಕೋರಿ ದಿನಾಂಕ: 08.03.2019 ರಂದು ಹೈಕೋರ್ಟ್‌ನಲ್ಲಿ WP No.15937/2019 ಸಲ್ಲಿಸಿದ್ದರು.
ಹೈಕೋರ್ಟ್ ದಿನಾಂಕ: 18.06.2019 ರಲ್ಲಿ ನೀಡಿದ ಆದೇಶದ ಮೇರೆಗೆ ಕೃಷ್ಣಾ ಭಾಗ್ಯ ಜಲ ನಿಗಮದ ಅಧಿಕಾರಿಗಳು ಸಲ್ಲಿಸಿರುವ ಪರಿವೀಕ್ಷಣಾ ವರದಿಯನ್ನು ಪರಿಶೀಲಿಸಿ, ದಿನಾಂಕ: 27.06.2019 ರಂದು PIL ಕೋರಿಕೆಯನ್ನು ಹೈಕೋರ್ಟ್ ತಿರಸ್ಕರಿಸಿದೆ.
04 ಬ್ಯಾರೇಜುಗಳಲ್ಲಿ 2016ರ ಸಾಲಿನಲ್ಲಿ ಸೆಪ್ಟೆಂಬರ್ ಹಾಗೂ ಅಕ್ಟೋಬರ್ ತಿಂಗಳಲ್ಲಿ ಮಾಂಜ್ರಾ ನದಿಯಲ್ಲಿ ಬೃಹತ್ ಪ್ರಮಾಣದ ಅಂದರೆ 1.00 ಮೀ ರಿಂದ 4.60 ಮೀ. ಎತ್ತರಕ್ಕೆ ಬಂದ ಪ್ರವಾಹದಿಂದಾಗಿ ಕೆಲವು ಗೇಟುಗಳು ಹಾನಿಗೊಳಗಾಗಿದ್ದವು.ಹೀಗೆ ಹಾನಿಗೊಳಗಾಗಿದ್ದ ಗೇಟುಗಳನ್ನು ಮೂಲ ಗುತ್ತಿಗೆದಾರರಿಂದ ನಿಗಮಕ್ಕೆ ಹೆಚ್ಚಿನ ಆರ್ಥಿಕ ಹೊರೆ ಆಗದಂತೆ ದುರಸ್ತಿಗೊಳಿಸಿ 2017ನೇ ಸಾಲಿನಲ್ಲಿ ಗೇಟುಗಳನ್ನು ಸಮರ್ಪಕವಾಗಿ ಅಳವಡಿಸಿ ನೀರು ಶೇಖರಣೆ ಮಾಡಲಾಯಿತು.
</td></tr>
<tr><td>ಆ</td><td>4 ಬ್ಯಾರೇಜ್‌ಗಳ ನಿರ್ಮಾಣಕ್ಕೆ ಖರ್ಚು ಮಾಡಲಾಗಿರುವ ಹಣವೆಷ್ಟು; ಮತ್ತು ಯಾವ ಯಾವ ವರ್ಷದಲ್ಲಿ ಬ್ಯಾರೇಜ್‌ಗಳನ್ನು ನಿರ್ಮಾಣ ಮಾಡಲಾಗಿದೆ, ವಿವರ ನೀಡುವುದು.</td><td>ಬೀದರ್ ಜಿಲ್ಲೆಯಡಿ ಗೋದಾವರಿ ಕಣಿವೆಯ ಮಾಂಜ್ರಾ ನದಿ ಪಾತ್ರದಡಿ ಸರ್ಕಾರದ ಆದೇಶದನ್ವಯ ಕೃಷ್ಣಾ ಭಾಗ್ಯ ಜಲ ನಿಗಮದ ವತಿಯಿಂದ ಈ ಕೆಳಕಂಡ 4 ಸರಣಿ ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗಿದೆ. ವಿವರಗಳು ಈ ಕೆಳಗಿನಂತಿವೆ;</td></tr>
</table>

<table>
<tr><th>ಕ್ರ ಸಂ.</th><th>ಪ್ರಶ್ನೆಗಳು</th><th>ಉತ್ತರ</th></tr>
<tr><td>ಇ</td><td>ಈ ಸರಣಿ ಬ್ಯಾರೇಜ್‌ಗಳ ನಿರ್ಮಾಣದಿಂದ ಒಟ್ಟು ಎಷ್ಟು ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ (ಸಂಪೂರ್ಣ ಮಾಹಿತಿ ನೀಡುವುದು)</td><td>
<table>
<tr><th>ಕ್ರ ಸಂ</th><th>ಯೋಜನೆ ಹೆಸರು</th><th>ನಿರ್ಮಾಣದ ವೆಚ್ಚ (ರೂ.ಕೋಟಿಗಳಲ್ಲಿ)</th><th>ಪೂರ್ಣ ಗೊಂಡ ವರ್ಷ</th><th>ನೀರಾವರಿ ಕ್ಷೇತ್ರ (ಹೆಕ್ಟೇರ್)</th></tr>
<tr><td>1</td><td>ಜೀರಗಿಹಾಳ ಬ್ರಿಡ್ಜ್ ಕಂ ಬ್ಯಾರೇಜ್</td><td>57.84</td><td>2014</td><td>1,980</td></tr>
<tr><td>2</td><td>ಮಾಣಿಕೇಶ್ವರ ಬ್ರಿಡ್ಜ್ ಕಂ ಬ್ಯಾರೇಜ್</td><td>50.73</td><td>2012</td><td>1,980</td></tr>
<tr><td>3</td><td>ಹಾಲಹಳ್ಳಿ ಬ್ರಿಡ್ಜ್ ಕಂ ಬ್ಯಾರೇಜ್</td><td>104.27</td><td>2013</td><td>6,732</td></tr>
<tr><td>4</td><td>ಚಂದಾಪೂರ ಬ್ರಿಡ್ಜ್ ಕಂ ಬ್ಯಾರೇಜ್</td><td>58.66</td><td>2011</td><td>1,980</td></tr>
<tr><td></td><td>ಒಟ್ಟು</td><td>271.50</td><td></td><td>12,672</td></tr>
</table>
ಸದರಿ ಬ್ಯಾರೇಜಿನಲ್ಲಿನ ನೀರಿನ ಸಂಗ್ರಹಣೆಯಿಂದ ರೈತರು ಸ್ವತ: ನೀರನ್ನು ಎತ್ತಿ ಉಪಯೋಗಿಸುವುದಾಗಿದ್ದು, ಹಿಂಗಾರು ಹಾಗೂ ಮುಂಗಾರು ಹಂಗಾಮಿಗಾಗಿ ಒಟ್ಟು ನೀರಾವರಿಗೆ ಒಳಪಡುವ ಕ್ಷೇತ್ರ 12672 ಹೆಕ್ಟೇರ್. ಬ್ಯಾರೇಜ್‌ನಲ್ಲಿನ ನೀರಿನ ಸಂಗ್ರಹಣೆಯಿಂದ ಭೂಮಿಯಲ್ಲಿ ನೀರಿನ ಮಟ್ಟದ ಪ್ರಮಾಣ ಏರಿಕೆಯಾಗಿರುತ್ತದೆ ಮತ್ತು ಸುತ್ತುಮುತ್ತಲಿನ ನಗರ, ಪಟ್ಟಣ ಮತ್ತು ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆಯನ್ನು ಸರ್ಕಾರದಿಂದ ಕಲ್ಪಿಸಲಾಗಿದೆ.</td></tr>
<tr><td>ಈ</td><td>ನೂರಾರು ಕೋಟಿ ರೂಪಾಯಿ ವೆಚ್ಚ ಮಾಡಿ ನಿರ್ಮಾಣ ಮಾಡಲಾದ ಯೋಜನೆಯಲ್ಲಿ ಅಕ್ರಮ ಮತ್ತು ಲೋಪದೋಷಗಳು ಉಂಟಾಗಲು ಕಾರಣವೇನು; ಇದಕ್ಕೆ ಕಾರಣರಾದವರುಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗುವುದು (ಸಂಪೂರ್ಣ ಮಾಹಿತಿ ನೀಡುವುದು)</td><td>ಬೀದರ ಜಿಲ್ಲೆಯ, ಚಂದಾಪೂರ, ಹಾಲಹಳ್ಳಿ, ಜೀರಗಿಹಾಳ ಮತ್ತು ಮಾಣಿಕೇಶ್ವರ ಬ್ರಿಡ್ಜ್ ಕಂ ಬ್ಯಾರೇಜ್‌ನ ಗೇಟುಗಳು 2016 ನೇ ಸಾಲಿನಲ್ಲಿ ಬೃಹತ್ ಪ್ರಮಾಣದ ಪ್ರವಾಹದಿಂದ ಕೆಲವು ಗೇಟುಗಳು ಹಾನಿಗೊಳಗಾಗಿದ್ದು, ಹಾನಿಗೊಳಗಾಗಿದ್ದ ಗೇಟುಗಳನ್ನು 2017 ನೇ ಸಾಲಿನಲ್ಲಿ ಮೂಲ ಗುತ್ತಿಗೆದಾರರಿಂದ ದುರಸ್ತಿಯನ್ನು ಕೈಗೊಂಡು ಪೂರ್ಣಗೊಳಿಸಲಾಗಿದೆ. ಸದರಿ ಬ್ಯಾರೇಜುಗಳಿಗೆ ಅಳವಡಿಸಲಾದ ಗೋಡಬೋಲೆ ಗೇಟು ಸಮರ್ಪಕವಾಗಿ ಉದ್ದೇಶಿಸಿದಂತೆ ಕಾರ್ಯನಿರ್ವಹಿಸುತ್ತಿರುವುದರಿಂದ ಗುತ್ತಿಗೆದಾರರು ಮತ್ತು ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡಿರುವುದಿಲ್ಲ.</td></tr>
<tr><td>ಉ</td><td>ಕೂಡಲೇ 4 ಬ್ಯಾರೇಜ್‌ಗಳ ಗೇಟುಗಳನ್ನು ಸರಿಪಡಿಸಿ ರೈತರಿಗೆ ನೀರು ಸರಬರಾಜು ಮಾಡಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು/ (ಸಂಪೂರ್ಣ ಮಾಹಿತಿ ನೀಡುವುದು).</td><td>ಮಾಂಜ್ರಾ ನದಿಗೆ ಅಡ್ಡಲಾಗಿ ನಿರ್ಮಿಸಿರುವ 4 ಸರಣಿ ಬ್ಯಾರೇಜ್‌ಗಳ ಗೇಟ್‌ಗಳಿಗೆ ಸ್ಥಳೀಯ ಹಾಗೂ ತಾಂತ್ರಿಕ ಅವಶ್ಯಕತೆಗಳಿಗೆ ಅನುಗುಣವಾಗಿ ಹಾಗೂ ಪ್ರವಾಹ ಸಂದರ್ಭದಲ್ಲಿ ಯಾವುದೇ ಹಾನಿಯಾಗದಂತೆ ನಿಯಂತ್ರಿಸಲು low Level Friction Damping Arrangement, Jet splitting arrangements & Hydraulic Cylinders ಅಳವಡಿಕೆಯ ಕಾಮಗಾರಿಗಳನ್ನು ಮಾರ್ಚ್ 2018 ರಲ್ಲಿ ಪೂರ್ಣಗೊಂಡಿರುತ್ತವೆ. 2019ನೇ ಸಾಲಿನಿಂದ ಮಳೆಗಾಲದ ಅವಧಿಯಲ್ಲಿ ಮಾಂಜ್ರಾ ನದಿ ಪಾತ್ರದಡಿ ಹರಿದು ಬರುವ ನೀರನ್ನು ಶೇಖರಿಸಿ ನೀರಾವರಿ ಮತ್ತು ಕುಡಿಯುವ ನೀರಿನ ಸೌಲಭ್ಯ ಒದಗಿಸಲಾಗಿರುತ್ತದೆ.</td></tr>
</table>

ಸಂಖ್ಯೆ: ಜಸಂಇ 120 ಎಂಎಲ್‌ಎ 2020

(ರಮೇಶ್ ಲ. ಜಾರಕಿಹೊಳಿ)
ಜಲಸಂಪನ್ಮೂಲ ಸಚಿವರು